Regd No M 1229 | 43rd Year | Sri 'Satyavadi' Mysore | 2—3—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎ. ನಿ ಸುಬ್ಬರಾಯುರು [ದಿ]

Project ... Low
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಭಾರತ ಮಹಿಳೆಯ ಮೇಲೆ ಪಾಕಿಸ್ತಾನ ಪೋಲೀಸರ ಅತಾಚಾರ

ಪ್ರತ್ಯೇಕ ಕಾಲೇಜ್

ದರ್ಬಾಂಗ್ 28— ದರ್ಬಾಂಗಿನ ಭಾರತೀಯರಿಗೇ ಪ್ರತ್ಯೇಕ ಯೂನಿವರ್ಸಿಟಿ ಕಾಲೇಜನ್ನು ಕಟ್ಟಲು ದಕ್ಷಿಣ ಆಫ್ರಿಕಾ ಸರಕಾರ ಯೋಜಿಸಿದೆ.

ಅಂದಾಜಪಟ್ಟಿ ಮಂಡನೆ

ನವದೆಹಲಿ 28— ಭಾರತದ ಹಣಕಾಸಿನ ಮಂತ್ರಿ ಮೊರಾರ್ಜಿ ದೇಸಾಯರು ತಮ್ಮ ಬಜೆಟ್ ಭಾಷಣದಲ್ಲಿ, ರಕ್ಷಣಾ ಖರ್ಚು ೨೫೦.೭ ಕೋಟಿ ರೂಗಳಿಂದ [illegible] ಇಳಿಸಲಾಗಿದೆಯೆಂದು ತಿಳಿಸಿದರು — ೧೯೫೯-೬೦ನೇ ಸಾಲಿನ ತೆರಿಗೆಗಳಿಂದ 257.51 ಕೋಟಿ ರೂಪಾಯಿ ಹೆಚ್ಚುವರಿ ಮತ್ತು 839.18 ಕೋಟಿ ರೂ. ಸಾಲದ್ದು, 81.67 ಕೋಟಿಗಳು ಹೆಚ್ಚಾಗಿ ಇರುವುದೆಂದೂ ತಿಳಿಸಿದರು — ೧೯೫೯-೬೦ ಖರ್ಚು 242.68 ಕೋಟಿ ರೂಗಳೆಂದು ಹೇಳಿದರು

ಂ ಂ

ಬೆಂಗಳೂರು 1— ವೈಸೂರು ಶಾಸನಸಭೆಯಲ್ಲಿ ಬಜೆಟ್ಟು ಮಂಗಳವಾರ ಮಂಡಿಸಲ್ಪಡುವುದು.

ರಾಜೀನಾಮೆ

ಬೆಂಗಳೂರು 28— ಶಾಸನಸಭೆಗಳ [illegible] ಅಧಿವೇಶನದಲ್ಲಿ, ಗೌರ್ನರ ಭಾಷಣ ಕಾಲದಲ್ಲಿ ವಿರೋಧಪಕ್ಷದ ಏಕೀಕರಣ ಸಮಿತಿಯ ಒಬ್ಬ ಸದಸ್ಯರು ಸಭಾ ಧರಿತ್ಯಾಗ ಮಾಡಿದರು; ಬೆಳಗಾವಿಯನ್ನು ಭಾಷಾವಾರು ಪ್ರಾಂತ್ಯಕ್ಕೆ ಸೇರಿಸಬೇಕೆಂಬ ಸಮಿತಿಯ ಕೇಳಿಕೆಯು ಒಕ್ಕಾಟುಮುಕ್ಕಾಗಿ ಈ ಕ್ರಮ.

ಅಲಂಬಿ ಪಿ — ಪ್ರತಿನಿಧಿಸಭೆಯು ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು [illegible] ಪಕ್ಷದವರು.

ಕರೀಂಗಂಜ್ 1 — ಇಲ್ಲಿಗೆ 9 ಮೈಲಿಗಳ ದೂರದಲ್ಲಿ ಭಾರತದ ಗಡಿ ಗ್ರಾಮ ದಕ್ಷಾಪುರದ ಮೇಲೆ ಪಾಕಿಸ್ತಾನದ ವಾರು ಪೋಲೀಸರೊಡನೆ ಪಾಕಿಸ್ತಾನ ರಾಷ್ಟ್ರೀಯರು ಧಾಳಿ ಮಾಡಿದರು ಪಾಕಿಸ್ತಾನದ ಸಿಪಾಯಿಗಳು ಎಂಡು ಗ್ರಾಮಗಳಲ್ಲಿ ಮನೆಯವರನ್ನು ಹೊಡೆದು ಲೂಟಿ ಮಾಡಿ ರೂ 1700 ತೆಗೆದುಕೊಂಡರು ಕರೀಂಗಂಜಿನ ಪೋಲೀಸು ಠಾಣೆಗೆ ಗ್ರಾಮಸ್ಥರು ದೂರಿತ್ತ ಪ್ರಕಾರ ಭಾರತೀಯ ಮಹಿಳೆಯೋರ್ವಳ ಮೇಲೆ ಪಾಕಿಸ್ತಾನ ಸಿಪಾಯಿಗಳು ಅತ್ಯಾಚಾರ ಮಾಡಿದರು ಹತ್ತಕ್ಕಿತಿಲ್ಲದ ಮೇಲೆ ಪಾಕಿಸ್ತಾನದವರ ಗೋಳೀಬಾಳಿನಿಂದ ವ್ಯತ್ಯೋರ್ವ ಭಾರತೀಯ ಸತ್ತನು ಮುರ್ಷಿದಾಬಾದಿನ ಅಖಿರ್ ಗಂಜಿನ ಅಧಿಕಾರಿದ್ದ ಮತ್ತು ಅಲ್ಲ ಭಕ್ಷ್ಯ ಮಹಲದಾರೆಂಬ ಬಿಸ್ತಾರನ್ನು ಪೂರ್ವ ಪಾಕ್ ಪೋಲೀಸರು ಬಂಧಿಸಿದ್ದಾರೆ

ಕೈಮಗ್ಗ ಬಟ್ಟೆ ಉತ್ಪಾದನೆ

ಸಿಂಗ್ಪುರ 28 — ಭಾರತ ಕೈಮಗ್ಗ ಉತ್ಪಾದನೆ 5 ಲಕ್ಷ ಗಜಗಳಿಂದ 6 ವರೆ ಲಕ್ಷ ಗಜಗಳ ವರಿಗೆ ಕಳೆದ ವರ್ಷ ಮಲಯಾದಲ್ಲಿ ಮಾರಾಟವಾಗಿದೆ

ಮುಷ್ಕರ ಹೂಡುವ ಹಕ್ಕು

ಕರಾಚಿ 28 — ಪಾಕಿಸ್ತಾನ ಕಾರ್ಮಿಕ ಮಂತ್ರಿ ಲೆ|| ಜ|| ಡಬ್ಲ್ಯು ಎ ಬರ್ಕಿ ಈ ದಿನ ಹೇಳಿಕೆಯಿತ್ತು, ಮುಷ್ಕರ ಹೂಡುವ ಹಕ್ಕನ್ನು ಕಾರ್ಮಿಕರಿಗೆ ಕೊಡುವದಾಗಿ ತಿಳಿಸಿದರು

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
3 ನವಮಿ ಜ್ಯೇಷ್ಠ

ರೇವು ಕೆಲಸಗಾರರ ಮುಷ್ಕರ

ಕಲ್ಕತ್ತಾ 1 — ಕಮ್ಮಿ ಬೇಡಿಕೆಗಳು ಈಡೇರಲಿಲ್ಲವೆಂದು ರೇವು ಕೆಲಸಗಾರರು ಹತಾತ್ಕನೆ ಕೆಲಸ ನಿಲ್ಲಿಸಿ ಮುಷ್ಕರ ಹೂಡಿರುವರು

ಬಂಧನ

ವಾರಾಣಾಸಿ 1 — ಇಲ್ಲಿ ಜಾರಿಯಲ್ಲಿರುವ 144 ನೇ ವಿಧಿ ಭಂಗಮಾಡಿದ ಆರೋಪದ ಮೇಲೆ ಹಿಂದೂ ರಾಷ್ಟ್ರೀಯ ಸಮಾಜವಾದಿ ದಳದ ಪ್ರಧಾನ ಕಾರ್ಯದರ್ಶಿ ಶ್ರೀ ಎಲ್. ಬಿ ಥಟ್ಟೆ, ಶ್ರೀ ಕಾಶಿ ವಿಶ್ವನಾಥ ಮಂದಿರ ಸುಧಾರ ಸಂಘರ್ಷ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀ ದಿವಾಕರ ದೇಶಪಾಂಡೆಯವರು ಸೇರಿ 4 ಜನ ಬಂಧಿತರಾದರು.

ಉತ್ಪಾದಿಸಿ

ಲಕ್ನೊ 1 — ದಾರಿದ್ರ್ಯತೆ ಮತ್ತು ಅಭಿವೃದ್ಧಿ ಹೊಂದದಿರುವದರ ಪಂದೆಯಿಂದ ದೇಶ ಹೊರಬರಲು ಉಳುವರು ಉತ್ಪಾದನೆ ಮಾಡಬೇಕೆಂದು ಪಂ|| ನೆಹರು ತಿಳಿಸಿದ್ದಾರೆ.

ಲಕ್ನೊ 1 — ಇತರ ಭಾಷೆಗಳಂತೆ ಉರ್ದು ಇರಲು ಹಕ್ಕಿದೆ ಎಂದು ಪಂ|| ನೆಹರು ತಿಳಿಸಿದರು. ಅವರು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಈ ರೀತಿ ತಿಳಿಸಿದರು

ಂ ಂ

ನವದೆಹಲಿ 27 — ಈ ಶಾಸ್ತ್ರ ರೈಲ್ವೆಯ ಸ್ಟೇಷನ್ ಮಾಸ್ಟರು ಒಬ್ಬರು ಸುಮಾರು 8 ಸಾವಿರ ರೂ ದುರುಪಯೋಗ ಮಾಡಿದ್ದಕ್ಕಾಗಿ ಅವರಿಗೆ ಲಕ್ನೊ ವಿಶೇಷ ನ್ಯಾಯಾಧೀಶರು ಒಂದು ವರ್ಷ ಕಠಿಣ ಸಜೆಯನ್ನು ರೂ 250 ದಂಡ ವಿಧಿಸಿರುವರು

ಸುದ್ದಿಗಳು

ಕಾರವಾರ 28— ಮಹಾರಾಷ್ಟ್ರರ ಘೋಷಣೆಗಳನ್ನು ಕೂಗುತ್ತಾ, ಈ ವಾರದಲ್ಲಿ ಇಲ್ಲಿನ ಕಲೆಕ್ಟರ ಕಚೇರಿಯ ಮುಂದೆ ಸತ್ಯಾಗ್ರಹ ಹೂಡಿದ 3 ತಂಡಗಳ 13 ಜನರು ಬಂಧನವಾಗಿದೆ

ಹೈದರಾಬಾದು 1 — ರಾಷ್ಟ್ರೀಯ ಹಿತದೃಷ್ಟಿಯಿಂದ ಕಾಂಗ್ರೆಸಿಗೆ ಸೇರಿ ಅದನ್ನು ಬಲಪಡಿಸುವಂತೆ ಸ್ವಾಗತಿಸುವಳೆಂದು ಇಂದಿರಾ ಕಾಂಗ್ರೆಸುಕೊಟ್ಟಿದೆ

ವಿಶಾಖಪಟ್ಟಣ 28 — ಗಾರ್ವಾಪುರ ರೈಲ್ವೆ ನಿಲ್ದಾಣದಲ್ಲಿ ವಿಶಾಖಪಟ್ಟಣದಿಂದ ಕಾಂಗ್ರೆಸಿಗೆ ತೆರಳುತ್ತಿದ್ದ ಇಬ್ಬರು ಪ್ರಯಾಣಿಕರನ್ನು ಗುಂಡಿನೇಟಿನಿಂದ ಕೊಲ್ಲಲಾಗಿದೆ

ಬೊಂಬಾಯಿ 28 — ಏಪ್ರಿಲ್ 30 ನೇ ತಾ|| ಒಳಗೆ 57 ಮತ್ತು 58 ರ ದೋನಸ್ಸು ಪ್ರಶ್ನೆಗೆ ತೃಪ್ತಿಕರವಾದ ಪರಿಹಾರ ಸಿಗದಿದ್ದರೆ ಮುಷ್ಕರವನ್ನೊಳಗೊಂಡ ನೇರ ಕಾರ್ಯಾಚರಣೆಯನ್ನು ಹೂಡಬೇಕೆಂದು ಅಖಿಲ ಭಾರತ ವಿಮಾ ಕಾರ್ಮಿಕರ ಕಾರ್ಯಕಾರಿ ಸಮಿತಿ 3 ದಿನಗಳ ಸಭೆಯಲ್ಲಿ ನಿರ್ಧರಿಸಿದೆ

ಚಂಡೀಘರ್ 27— ಸ್ಟೇಟ್ ಸೆಕ್ರಿಟೇರಿಯಟ್ಟಿನ ಹೊರಗೆ ಸೇರಿದ ಒಂದು ಗುಂಪನ್ನು ಕುರಿತು ಮಾತನಾಡುತ್ತಾ, ಮುಖ್ಯ ಮಂತ್ರಿ ಸರದಾರ್ ಪ್ರತಾಪ್ ಸಿಂಗರು "ಸರಕಾರವು ಮಾನವ ಪ್ರೇಮದಿಂದ ತೆಗೆದ ಸಿವಿಲ್ ಸೆಕ್ರಿಟೇರಿಯಟ್ ಹೃದಯದಂತೆ ಕೆಲಸ ಮಾಡುತ್ತಿರುವುದು" ಎಂದು ಹೇಳಿದರು — ಆಗ "ಪ್ರಧಾನ ಸಚಿವರು "ಸೆಕ್ರಿಟೇರಿಯಟ್ ಸರಕಾರದ ವೆದಳು ಅಥವಾ ಕೈಕಾಲುಗಳು" ಎಂದು ಹೇಳುವುದು ಸೂಕ್ತವಾಗಿದೆ ಎಂದು ಹೇಳಿದರು.

ಸರ್ವೋದಯತತ್ವ

(ಮುಂದುವರಿದುದು)

ವಿನೋಬಾಜೀಯವರ ಆಶಯವು ದೊಡ್ಡದು; ಅತ್ಯಂತ ಕ್ರಾಂತಿಕಾರಿ; ಅದನ್ನು ಅರ್ಥಮಾಡಿಗೂಳ್ಳಬೇಕಾದರೆ ನಮ್ಮ ಅಂತಃಕರಣದಲ್ಲಿರುವ ಸ್ವಾರ್ಥದ ಮನೋಭಾವವನ್ನು ಕಿತ್ತು ಹಾಕಿ ಅದರ ಸ್ಥಾನದಲ್ಲಿ ತ್ಯಾಗದ ಪವಿತ್ರ ಬೀಜವನ್ನು ನಡಬೇಕು, ಶ್ರದ್ಧಾಭಕ್ತಿಗಳಿಂದ ಅದನ್ನು ಪೋಷಿಸಿ ರಕ್ಷಿಸಿದರೆ ಮಾತ್ರ ಫಲಕಾರಿಯಾದೀತು. ನಮಗೆ ರಾಜಕೀಯ ಸ್ವಾತಂತ್ರ್ಯ ಬಂದು 10 ವರ್ಷಗಳಾಯಿತು; ಎಂಡು ಚುನಾವಣೆಗಳು ನಡೆದಿವೆ: ಪ್ರಜಾನುಂಗಿಯಾದ, ಸ್ವಾರ್ಥ ತ್ಯಾಗಿಯಾದ, ತನ್ನನ್ನು ಚುನಾಯಿಸಿದ ಪ್ರದೇಶದ ಕಷ್ಟಸುಖಗಳನ್ನು ಅರಿತು ಅದಕ್ಕೆ ತಕ್ಕ ಪ್ರತೀಕಾರವನ್ನು ಸೂಚಿಸುವ ಯೋಗ್ಯವಾದ ವ್ಯಕ್ತಿಯನ್ನು ಆರಿಸುವುದೇ ಚುನಾವಣೆಯ ಮುಖ್ಯ ಉದ್ದೇಶ: ಆಂತಹ ವ್ಯಕ್ತಿಯನ್ನು ಆರಿಸುವುದಕ್ಕೆ ಬದಲಾಗಿ ಓಟಿನ ಬೇಟೆಯು ವಿವಿಧ ರೂಪದಲ್ಲಿ ನಡೆದು, ಹೆಚ್ಚು ಹಣವನ್ನು ಖರ್ಚುಮಾಡಿದವನಿಗೆ ಪೂರ್ತ ಚುನಾವಣೆಯಾಗಿದೆ. ಮೊದಲನೆಯ ಚುನಾವಣೆಯ ತಪ್ಪನ್ನು ತಿದ್ದಲೆತ್ನಿಸಿದ ಭರದಲ್ಲಿ ದ್ವೇಷಾಸೂಯೆಗಳು ಹೊರಹೊಮ್ಮಿ ಅಲ್ಲಿಯೂ ಫಸದಾಕ್ಷಿಣ್ಯಗಳ ಸಂಸಾರಂಗಳು ನಡೆದಿವೆ ನಮ್ಮ ನಾಯಕರು ಗ್ರಾಮವನ್ನು ಉದ್ಧರಿಸಲು ಸಾಹಸಪಡುತ್ತಿದ್ದಾರೆ; ಗ್ರಾಮಪಂಚಾಯತಿಗಳಿಗೆ ವಿಶೇಷವಾದ, ಅಪರಿಮಿತವಾದ ಅಧಿಕಾರವು ಒದಗಲಿದೆ; ಏನಿಯೋಗದಲ್ಲಿ ಮಾತ್ರ ತೊಂದರೆ: ಗ್ರಾಮದ ಪುರೋಭಿವೃದ್ಧಿಯು ಗ್ರಾಮದ ಮುಖಂಡರು ಸ್ವಾರ್ಥತ್ಯಾಗಿಗಳಾದರೆ ಮಾತ್ರ, ವಿಶಾಲ ಭಾವನೆ ಇದ್ದರೆ ಮಾತ್ರ ಸಾಧ್ಯ; ಆಗ ಗ್ರಾಮದ ಸುಖಸಂತೋಷಗಳನ್ನು ಅನುಭವಿಸಬಹುದೆಂಬುದನ್ನು ಗಮನಿಸಬೇಕು; ಗ್ರಾಮದಾನದ ಚಳುವಳಿಯು ಫಲವಾಗಿ ಗ್ರಾಮದೇ ವಿನೋಬಾಜಿಯವರಿಗೆ ದಾನಮಾಡಲ್ಪಟ್ಟರೆ ಅದು ಪುನಃ ಗ್ರಾಮಸ್ಥರಿಗೇ ಹಿಂದುರಿಗಿಸಲ್ಪಡುವುದು; ಗ್ರಾಮವನ್ನು ಹಿಂದಿರುಗಿ ತೆಗೆದುಕೊಳ್ಳುವವರೂ ಅವರೇ ಆಗುವರು. ಆಗ ಗ್ರಾಮದ ಒಡೆತನವು ಅಲ್ಲಿನ ನೂರಾರು ಕುಟುಂಬಗಳಿಂದ ಅಪಹರಿಸಲ್ಪಟ್ಟು ನಾಲ್ಕು ಜನ ಪುಢಾರಿಗಳ ಸ್ವಾರ್ಥಸಾಧನೆಗೆ ಸೆರೆವಾಗಬಹುದು; ಗ್ರಾಮದ ಮುಖಂಡರಲ್ಲೂ ಒಮ್ಮೊಮ್ಮೆ ಪರಸ್ಪರ ದ್ವೇಷಾಸೂಯೆಗಳು ತಲೆದೋರಿದಾಗ ಗ್ರಾಮದ ಪುರೋಭಿವೃದ್ಧಿಗೆ ಬದಲಾಗಿ ಅಶಾಂತಿಯು ಬೀಡಾಗಬಹುದು ಇನ್ನು ತಾಲ್ಲೂಕು ದಾನದ ಚಳವಳಿ ಪ್ರಾರಂಭವಾದರೆ ಅದನ್ನು ದಾನ ಮಾಡುವವರೂ ಪುನಃ ಸಾರ್ವಜನಿಕರಾಗಿ ಸ್ವೀಕರಿಸುವವರೂ ಜವಾಬ್ದಾರಿಯಿಂದ ವರ್ತಿಸಬೇಕೆಂಬುದನ್ನು ಯೋಚಿಸಬೇಕಾಗುತ್ತದೆ. [ಸೇ. ಸ]

ವುಡ್‌ಲಾಂಡ್ಸ್ ಮೈಸೂರ 5 ನೇ ವಾರ

ಎಷ್ಟು ಸಾರಿ ನೋಡಿದರೂ ಮತ್ತೆಮತ್ತೆ ನೋಡಬೇಕೆನ್ನಿಸುವ ಚಿತ್ರರತ್ನ

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ - ನೂರ್ಜ, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಸಂಗೀತಪೂರ್ಣ ಪಾತ್ಯಪುಯು ಚಿತ್ರ — ನೀರಸ ನೃತ್ಯಗಳು ಗೇವಾಳಲರಿನಲ್ಲಿ

ಅಪೆರಾ— 1–3–59 ರಿಂದ

ಮಾಧವಿ

ನಟವರ್ಗ — ಎಸ್, ಜಾನಕಿ, ದೇವಿಕ, ಮನೋಹರ

ಮನಮೋಹಕ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

Printed & Published by Dharma Prachara Nirata M S Kri... at the Satyavadi Press Chamarajapuram, Mysore

Statement of Ownership and other particulars about

'SATYAVADI'

Place of Publication	—	Mysore
Periodicity of its publication	—	Daily
Printer's, Publsiher's, Editor's, name	—	M. S. Krishna Rao
Nationality		Indian
Address		1067 Chamarajapuram, Mysore
Ownership		M. S. Krishna Rao

I, M. S. Krishna Rao, hereby declare that the particulars given above are true to the best of my knowledge and belief.

Dated, 2 nd March 1959 — M. S. Krishna Rao
Signature of Publisher



ಯುದ್ಧ — 1939 ರಲ್ಲಿ ಹಿಟ್ಲರಿನ ಗುಂಪಿನವರು ಪ್ರಪಂಚವನ್ನು ಯುದ್ಧದಲ್ಲಿ ಮುಳುಗಿಸಿದಾಗ, ಪ್ರಪಂಚವಿಖ್ಯಾತ ವಿಜ್ಞಾನಿ ಪ್ರೊ || ಐನ್‌ಸ್ಟೈನ್‌ರು ನ್ಯೂಕ್ಲಿಯಸ್ ಶಕ್ತಿ, ಉಪಯೋಗಿಸುವ ಕಾರ್ಯಕ್ರಮ ನಡೆಸುವಂತೆ ಅಮೇರಿಕಾ ಸರಕಾರವನ್ನು ಒತ್ತಾಯಮಾಡಿದರು; ಡಾ || ಫೆರ್ಮಿಗೆ ಈ ಪ್ರಯೋಗಾಧಿಕಾರವನ್ನು ವಹಿಸಲಾಯಿತು.

2 ಚಿಕಾಗೊ ವಿಶ್ವವಿದ್ಯಾಲಯ — 1941 ರಲ್ಲಿ ಅಮೇರಿಕಾವು ಯುದ್ಧಕ್ಕೆ ಬೀಳಬೇಕಾಗಿ ಬಂದಾಗ, ಡಾ || ಫೆರ್ಮಿ ತನ್ನ ಕಾರ್ಯಕಂಗವನ್ನು ಚಿಕಾಗೊ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿಕೊಂಡನು: ಇಲ್ಲಿ ಯು 235 ಯುರೇನಿಯನ್ನು ಯು 238 ರಿಂದ ಪ್ರತ್ಯೇಕಿಸಲು ಶ್ರಮಿಸಿದರು,

3 ಕಡೆಗೆ ಡಾ || ಫರ್ಮಿ ನಾಯಕತ್ವದಲ್ಲಿ ವಿಜ್ಞಾನ ತಂಡವು ಪರಮಾಣು ಮೊದಲನೆ ನ್ಯೂಕ್ಲಿಯಂ' ಹತೋಟಿ ಪಡೆದರು.